MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - FRIDAY 12-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಎಪ್ರಿಲ್ ತಿಂಗಳ ಭಾರತದ ಪಾಮೆಣ್ಣೆ ಆಮದು 30 ಶೇಕಡಾ ಇಳಿಕೆ

ಪರ್ಯಾಯ ಖಾದ್ಯ ತೈಲಗಳಾದ ಸೋಯಾ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಯ ಆಮದು ಹೆಚ್ಚಳಗೊಂಡು ಭಾರತದ ಎಪ್ರಿಲ್ ತಿಂಗಳ ಪಾಮೆಣ್ಣೆ ಆಮದು 30 ಶೇಕಡಾ ಇಳಿಕೆಯಾಗಿ ಹಿಂದಿನ 14 ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ಪಾಮೆಣ್ಣೆ ಆಮದು ಮಾರ್ಚ್ ನಲ್ಲಿದ್ದ 728,530 ಟನ್‌ಗಳಿಂದ ಎಪ್ರಿಲ್‌ನಲ್ಲಿ 510,094 ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಸೂರ್ಯಕಾಂತಿ ಎಣ್ಣೆ ಆಮದು 68 ಶೇಕಡಾ ಹೆಚ್ಚಳದೊಂದಿಗೆ 249,122 ಟನ್‌ಗಳಾಗಿವೆಯೆನ್ನಲಾಗಿದೆ. ಸೋಯಾಬೀನ್ ಎಣ್ಣೆ ಆಮದು 1.4 ಶೇಕಡಾ ಹೆಚ್ಚಳದೊಂದಿಗೆ 262,455 ಟನ್‌ಗಳಾಗಿವೆಯೆನ್ನಲಾಗಿದೆ. ಮಲೇಶಿಯನ್ ಪಾಮೆಣ್ಣೆ ದರ ಟನ್‌ಗೆ 3766 ರಿಂಗಿಟ್ಸ್ ($ 849.12) ಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ.

## ಜೂನ್ 30ರ ತನಕ ಕಚ್ಚಾ ಸೋಯಾಬೀನ್‌ಎಣ್ಣೆ, ಸೂರ್ಯಕಾಂತಿ ಎಣ್ಣೆಯ ಮೇಲೆ ಆಮದು ಸುಂಕ ವಿನಾಯತಿ

ಕಚ್ಚಾ ಸೋಯಾಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಯ ಮೇಲೆ ಕಸ್ಟಂಸ್ ತೆರಿಗೆ ಹಾಗೂ ಕೃಷಿ ತೆರಿಗೆಯಿಂದ ಜೂನ್ 30ರ ತನಕ ವಿನಾಯತಿ ನೀಡಲಾಗಿದೆಯೆನ್ನಲಾಗಿದೆ. ಟ್ಯಾರೀಫ್ ರೇಟ್ ಕೋಟಾ (TRQ) ಲೈಸ್‌ನ್ಸ್ ಹೊಂದಿದ ಆಮದುದಾರರಿಗೆ ಮಾತ್ರ ಈ ಸೌಲಭ್ಯ ಲಭಿಸಲಿದೆಯೆನ್ನಲಾಗಿದೆ.

## ಜೋಳ ದರ ಹೆಚ್ಚಳ, ಗೋಧಿ ಸ್ಥಿರ

ಆವಕ ಇಳಿಕೆಯಿಂದ ದಾವಣಗೆರೆಯಲ್ಲಿ ಜೋಳ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಪ್ರಮುಖ ಮಾರುಕಟ್ಟೆಗಳಲ್ಲಿ ಗೋಧಿ ದರ ಸ್ಥಿರವಿದೆಯೆನ್ನಲಾಗಿದೆ.